

ಹಾಡು, ಬೀದಿನಾಟಕದ ಮೂಲಕ ಕಾರ್ಯಕರ್ತರು ಜನರನ್ನು ಸಂಘಟಿಸುತ್ತಿದ್ದರು

ಹಿಮಾಲಯದಲ್ಲಿ ಹೇರಳವಾಗಿ ಪೈನ್ ಮರಗಳು ಬೆಳೆಯುತ್ತವೆ. ಅವುಗಳಿಗೆ ಕಚ್ಚು ಹಾಕಿದಾಗ ಜಿನುಗುವ ಅಂಟನ್ನು 'ನ್ಯಾಚುರಲ್ ಆ್ಯಂಟಿಸೆಪ್ಟಿಕ್' ಆಗಿ ಬಳಸಲಾಗುತ್ತದೆ. ಪೈನ್ ನಾಶಕ್ಕೆ ಇಷ್ಟು ಸಾಕಲ್ಲ? ಈ ಮರಗಳ ಕಡಿತದ ವಿರುದ್ಧ 'ಚಿಪ್ಕೋ' ಚಳವಳಿಗಾರರು ಪ್ರತಿಭಟನೆ ಶುರು ಮಾಡಿದರು. "ಆ ಸಮಯದಲ್ಲಿ ಗೋಡೆಗಳ ಮೇಲೆಲ್ಲ ಸರ್ಕಾರದ ಘೋಷಣೆ ಹೇಗಿತ್ತು ಗೊತ್ತೇ? 'ಕ್ಯಾ ಹೈ ಜಂಗಲ್ ಕೇ ಉಪಕಾರ್? ಲೀಸಾ (ಅಂಟು), ಲಕಡಿ (ಕಟ್ಟಿಗೆ) ಔರ್ ವ್ಯಾಪಾರ್.' ಇದಕ್ಕೆ ಪ್ರತಿಯಾಗಿ ಜನರು ಬಹುಗುಣ ಜತೆ ಸಮಾಲೋಚಿಸಿ, ಇನ್ನೊಂದು ಘೋಷಣೆಯನ್ನು ಹೀಗೆ ರಚಿಸಿದರು: ''ಕ್ಯಾ ಹೈ ಜಂಗಲ್ ಕೇ ಉಪಕಾರ್? ಮಿಟ್ಟಿ, ಪಾನಿ ಔರ್ ಹವಾಯ್''

ಚಿಪ್ಕೋ ಚಳವಳಿ ಜಗತ್ತಿಗೆ ಗೊತ್ತಾಗುವಂತೆ ಮಾಡಿದ್ದೇ ಬಹುಗುಣ. ಇದು ಒಂದು ಸಣ್ಣ ಹಳ್ಳಿಯಲ್ಲಿ ಶುರುವಾಗಿ ಸಲೇಖ್, ಬಡಿಯಾರಘಟ್, ಕಾಮಗಢ ಇತ್ಯಾದಿ ಕಡೆ ಸಾಗಿ, 1980ರಲ್ಲಿ ಚಂಬಾದ ಶುಕ್ಲಾದೇವಿ ದೇಗುಲ ಮೂಲಕ ಖುರೇಕ್ ಗ್ರಾಮದಲ್ಲಿ ಮುಕ್ತಾಯವಾಯಿತು. ಇದರುದ್ದಕ್ಕೂ ಬಹುಗುಣ ವಹಿಸಿದ ಪಾತ್ರ ಅನನ್ಯವಾದುದು.

## ಚಳವಳಿ ಸಾಗಿದ್ದು

1978ರ ನವೆಂಬರ 25ರಂದು ಬಡಿಯಾರ ಘಾಟ್ ಹಳ್ಳಿಯಲ್ಲಿ ಕಾಡು ಕಟಾವು ವಿರೋಧಿಸಿ ಸಭೆ ನಡೆದಿತ್ತು. ನಾಳೆಯಿಂದ ಚಳವಳಿ ಶುರು ಮಾಡೋಣ ಎಂದು ಜರ್ದಾರಿ ಹೇಳಿದ್ದಕ್ಕೆ ಜನ ಒಪ್ಪಿದರು. ಮರುದಿನ ಬಹುಗುಣ ತಮ್ಮನ್ನು ಕರೆದು, 'ನೀವಿಲ್ಲೇ ಇದ್ದು ಚಳವಳಿ ಮುಂದುವರಿಸಿ' ಎಂದರು. "ಊರಿಗೆ ನಾನು ಹೊಸಬ. ಕೈಯಲ್ಲಿ ಹಣ ಇಲ್ಲ. ಆದರೆ ಅದು ಸಮಸ್ಯೆ ಅನಿಸಲೇ ಇಲ್ಲ. ದಿನವೂ ಒಬ್ಬೊಬ್ಬರ ಮನೆಯಲ್ಲಿ ವಾಸ್ತವ್ಯ, ಜನರನ್ನು ಸಂಘಟಿಸುವುದು ನಿತ್ಯ ಇದೇ ಕೆಲಸ. ಒಂದೂವರೆ ತಿಂಗಳ ಬಳಿಕ ಜನವರಿ 8ರಂದು 1979ರಂದು ಬಹುಗುಣ ಅವರು ಬಡಿಯಾರಘಾಟ್‌ಗೆ ವಾಪಸು ಬಂದು ಚಳವಳಿ ಸೇರಿಕೊಂಡರು. ನಮಗೆ ಮತ್ತಷ್ಟು ಬಲ ಬಂತು. ಬಲಪ್ರಯೋಗ, ಮನವೊಲಿಕೆ ಸೇರಿದಂತೆ ನಮ್ಮ ವಿರುದ್ಧ ಲಾಬಿ ಶುರುವಾಯಿತು. ಬಹುಗುಣ 14 ದಿನಗಳ ಉಪವಾಸ ಸತ್ಯಾಗ್ರಹ ಮಾಡಿದರು. ಜನ ಸೇರುತ್ತಾ ಹೋದರು. ಬಹುಗುಣ ಅವರನ್ನು ಬಂಧಿಸಿ ತೆಹರಿ ಜೈಲಿಗೆ ಕಳಿಸಿದರು. ನಾವು ಚಳವಳಿ ಮುಂದುವರಿಸಿದೆವು. ಅವರು ಜೈಲಿನಲ್ಲೂ ಉಪವಾಸ ಮುಂದುವರಿಸಿದರು. ಅಲ್ಲಿಂದ ಅವರನ್ನು ಡೆಹ್ರಾಡೂನ್ ಜೈಲಿಗೆ ವರ್ಗಾಯಿಸಲಾಯಿತು. ಸರ್ಕಾರದ ಮೇಲೆ ಒತ್ತಡ ಬಂತು. ಕೇಂದ್ರದಲ್ಲಿ ಇಂದಿರಾ ಗಾಂಧಿ ಸರ್ಕಾರ ಇತ್ತು. ರಾಜ್ಯದಲ್ಲಿ ವಿ.ಪಿ. ಸಿಂಗ್ ಸರ್ಕಾರ ಇತ್ತು. ಪ್ರಧಾನಿ ಇಂದಿರಾ ಗಾಂಧಿ ಮಧ್ಯೆ ಪ್ರವೇಶಿಸಿ, ಕಾಡು ಕಟಾವು ನಿಲ್ಲಿಸಲು ಸೂಚಿಸಿದರು. ಇಲ್ಲಿಗೆ ಚಿಪ್ಕೋ ಚಳವಳಿ ಯಶಸ್ವಿಯಾಯಿತು" ಎಂದು ಜರ್ದಾರಿ ಆಂದೋಲನ ಸಾಗಿ ಬಂದ ದಾರಿಯನ್ನು ಸುದೀರ್ಘವಾಗಿ ಬಿಚ್ಚಿಟ್ಟರು.

ಇದಕ್ಕೊಂದು ಕಾನೂನು ರೂಪಿಸಿ, ಸಮುದ್ರ ಮಟ್ಟದಿಂದ 1000 ಮೀಟರ್ ಎತ್ತರದಿಂದ ಮೇಲಿರುವ ಕಾಡನ್ನು ಬಳಸುವ ಹಕ್ಕನ್ನು ಸ್ಥಳೀಯರಿಗೆ ನೀಡಲಾಗುವುದು ಎಂಬ ಸರ್ಕಾರದ ನಿರ್ಧಾರದಿಂದಲೇ ಕಾಡು ಉಳಿದುಕೊಂಡಿತು. ಬಹುಗುಣ ಉಪವಾಸ ಸತ್ಯಾಗ್ರಹ ಹಿಂತೆಗೆದುಕೊಂಡರು.

## ಹಲವು ಪ್ರೇರಣೆ

ಬಹುಗುಣ ಅವರು ಸಹಚರರೊಂದಿಗೆ ನಡೆಸಿದ 'ಚಿಪ್ಕೋ' ಚಳವಳಿಯ ಸಕ್ರಿಯ ಕಾರ್ಯಕರ್ತರಾಗಿದ್ದ ವಿಜಯ್ ಜರ್ದಾರಿ, ಅವರೊಂದಿಗೆ ಇತರ



ಪರಿಸರ ಚಳವಳಿಗಳ ಪೈಕಿ ಪ್ರಬಲವೆನಿಸಿದ ಆಂದೋಲನವೊಂದಕ್ಕೆ 'ಚಿಪ್ಕೋ' ಹೆಸರು ನೀಡಿದ ಕವಿ ಘನಶ್ಯಾಮ ಸೈಲಾನಿ

ಆಂದೋಲನದಲ್ಲೂ ಭಾಗಿಯಾದವರು (ತೆಹ್ರಿ ಅಣೆಕಟ್ಟೆಗೆ ವಿರೋಧ, ಗಣಿಗಾರಿಕೆ ನಿಷೇಧ, ಮದ್ಯಪಾನ ವಿರೋಧಿ ಆಂದೋಲನ ಇತ್ಯಾದಿ). "ಮುಖ್ಯವಾಗಿ ಚಿಪ್ಕೋ ಆಂದೋಲನವು ನಮಗೆ ಕಾಡು ಹಾಗೂ ಅದರ ಸಂಬಂಧಿ ಚಟುವಟಿಕೆಯತ್ತ ಸೆಳೆಯಿತು. ಕಾಡಿನ ನಾಶದಿಂದ ಮೇಲ್ಮಣ್ಣು ನಾಶವಾಗಿ, ಫಲವತ್ತತೆ ಹಾಳಾಗಿತ್ತು. ದೇಸಿ ತಳಿ ಕಣ್ಮರೆಯಾಗಿದ್ದವು. 'ಚಿಪ್ಕೋ'ದಿಂದ ಪ್ರೇರಣೆ ಪಡೆದು, 1984ರಲ್ಲಿ 'ಬೀಜ ಬಚಾವ್ ಆಂದೋಲನ' ಆರಂಭಿಸಿದೆವು; ಒಂದು ವೇಳೆ ಆ ಆಂದೋಲನದಲ್ಲಿ ನಾವು ಪಾಲ್ಗೊಂಡಿರದಿದ್ದರೆ, ಈ ಆಂದೋಲನ ಹುಟ್ಟುತ್ತಲೇ ಇರಲಿಲ್ಲ" ಎಂದು ಸ್ಮರಿಸುವ ಜರ್ದಾರಿ, ಕಾಡೆಂದರೆ ಬರೀ ಮರಗಳ ಸಮೂಹವಲ್ಲ; ಅದರ ಅವಲಂಬಿತ ಸುಸ್ಥಿರ ಚಟುವಟಿಕೆಗಳು ಹಲವಾರು ಎಂದು ವಿಶ್ಲೇಷಿಸುತ್ತಾರೆ. ಬಹುಗುಣ ಅವರ ಚಿಪ್ಕೋ ಆಂದೋಲನದಿಂದ ಸ್ಫೂರ್ತಿ ಪಡೆದು, ಕರ್ನಾಟಕದಲ್ಲಿ ಯಶಸ್ವಿಯಾಗಿ ನಡೆದ 'ಅಪ್ಪಿಕೋ ಚಳವಳಿ' ಬಗ್ಗೆ ಹೆಚ್ಚೇನೂ ವಿವರಿಸುವ ಅಗತ್ಯವಿಲ್ಲ. ಇತರ ರಾಜ್ಯಗಳಲ್ಲೂ ಇದೇ ತೆರನಾದ ಆಂದೋಲನ ನಡೆದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

70 ವರ್ಷ ವಯಸ್ಸಿನ ಜರ್ದಾರಿ ಅವರಲ್ಲಿ 'ಚಿಪ್ಕೋ'ದ ಬಹುತೇಕ ಘಟನೆಗಳು ಅಚ್ಚಳಿಯದೇ ಉಳಿದಿವೆ. ಏಳು ವರ್ಷಗಳ ಕಾಲ ನಡೆದ ಆ ಆಂದೋಲನದಲ್ಲಿ ಹಣಕಾಸಿನ ಸಮಸ್ಯೆ ಇರಲೇ ಇಲ್ಲವಂತೆ. ಕಾರ್ಯಕರ್ತರಿಗೆ ಹಳ್ಳಿಯ ಮನೆಗಳಿಂದ ಊಟ ಬರುತ್ತಿತ್ತು; ಮಂದಿರ, ಸಮುದಾಯ ಭವನದಲ್ಲಿ ವಾಸ್ತವ್ಯ. ಕಾರ್ಯಕರ್ತರ ಸಂಖ್ಯೆ ಹೆಚ್ಚಾದಾಗ, ಪ್ರತಿ ಮನೆಯಿಂದ ಒಂದೊಂದೇ ರೊಟ್ಟಿ ಹಾಗೂ ಪಲ್ಯ ತರಲಾಗುತ್ತಿತ್ತು. ಯಾಕೆ ರೊಟ್ಟಿ ಕೊಡುತ್ತೀರಿ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ವಿಧಾನ ಅದು!

ಪರಿಸರ ಸಂರಕ್ಷಣೆಯತ್ತ ಜನರ ಹಾಗೂ ಸರ್ಕಾರಗಳ ಈಚಿನ ನಿರ್ಲಕ್ಷ್ಯದ ಬಗ್ಗೆ ಬಹುಗುಣ ಅವರಲ್ಲಿ ನಿರಾಶೆ ಮೂಡಿತ್ತೇ?

ಈ ಪ್ರಶ್ನೆಗೆ ಜರ್ದಾರಿ ಉತ್ತರ "ಖಂಡಿತ ಇಲ್ಲ". ಜೀವನದ ಸಂಧ್ಯಾಕಾಲದಲ್ಲೂ ಅವರಿಗೆ ಪರಿಸರ ಚಳವಳಿಗಳ ಚಿಕ್ಕ ಪ್ರಮಾಣದಲ್ಲಿ ನಡೆದರೂ ಬಗ್ಗೆ ಖುಷಿ ಇತ್ತು. ಅದರ ಕುರಿತು ಅಭಿಮಾನ ವ್ಯಕ್ತಪಡಿಸುತ್ತಿದ್ದರು. "ಸರ್ಕಾರದಲ್ಲಿ ಹಣ ಇದೆ. ಏನು ಬೇಕೋ ಅದು ಮಾಡುತ್ತಿದೆ. ಆದರೆ ಜನರು ತಮ್ಮ ಉಳಿವಿಗಾಗಿ ಹೋರಾಟ ಮಾಡಬೇಕು, ಮಾಡುತ್ತಿದ್ದಾರೆ. ದೊಡ್ಡ ಆಂದೋಲನ ಕಾಣಲಿಕ್ಕಿಲ್ಲ; ಆದರೆ ಜನ ಸುಮ್ಮನೇ ಕುಳಿತಿಲ್ಲವಲ್ಲ? ಬ್ರಹ್ಮಾಂಡ ಪ್ರಕೃತಿಯ ಒಂದಂಶವಾಗಿರುವ ಮನುಕುಲ ಯಾವತ್ತೂ ಉತ್ಸಾಹದ ಸಂಕೇತ. ಚೈತನ್ಯದ ಬದುಕಿನ ಎದುರು ಮೃತ್ಯುವಿನ ಮಾತೇಕೆ? ನಿರಾಶೆ ಮಾತೇಕೆ ಎಂದೇ ನನ್ನನ್ನು ಪ್ರಶ್ನಿಸಿದ್ದರು" ಎಂಬುದನ್ನು ಜರ್ದಾರಿ ನೆನಪಿಸಿಕೊಳ್ಳುತ್ತಾರೆ.

ಹೌದು! ಬಹುಗುಣ ಸದಾ ಹೇಳುತ್ತಿದ್ದ ಮಾತು ಅದೇ ಆಗಿತ್ತು. "ಸೇ ಯೆಸ್ ಟು ಲೈಫ್; ನೋ ಟು ಡೆತ್"